ದಿನಾಂಕಃ 24-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಮುಖ್ಯ ವಿಚಾರಣೆಃ</u>- ಅರ್ಜಿದಾರರ ಪರವಾಗಿ ಶ್ರೀ. ಎನ್.ಎನ್.ಆರ್. ವಕೀಲರಿಂದಃ-**

ನನ್ನ ಗಂಡನ ವೇತನ ದೃಢೀಕರಣ ಪತ್ರವನ್ನು ನಿಪಿ33 ಎಂದು, ನನ್ನ ಆಧಾರ್ ಕಾರ್ಡಿನ ನೋಟರಿ ಪ್ರತಿಯನ್ನು(ಮೂಲ ಪ್ರತಿಯೊಂದಿಗೆ ತಾಳೆ ಮಾಡಿ) ನಿಪಿ.34 ಎಂದು, ನನ್ನ ಪಾನ್ ಕಾರ್ಡಿನ ನೋಟರಿ ಪ್ರತಿಯನ್ನು(ಮೂಲ ಪ್ರತಿಯೊಂದಿಗೆ ತಾಳೆ ಮಾಡಿ) ನಿಪಿ.35 ಎಂದು, 4 ನೇ ಅರ್ಜಿದಾರರ ಬ್ಯಾಂಕಿನ ಪಾಸ್ ಬುಕ್ಕಿನ ದೃಢೀಕೃತ ನಕಲನ್ನು ನಿಪಿ.36 ಎಂದು, 4 ನೇ ಅರ್ಜಿದಾರರ ಆಧಾರ್ ಕಾರ್ಡಿನ ನೋಟರಿ ಪ್ರತಿಯನ್ನು(ಮೂಲ ಪ್ರತಿಯೊಂದಿಗೆ ತಾಳೆ ಮಾಡಿ) ನಿಪಿ.37 ಎಂದು ಗುರುತಿಸಲಾಯಿತು.

ಆದ್ದರಿಂದ, ನನ್ನ ಅರ್ಜಿಯನ್ನು ಪುರಸ್ಕರಿಸಿ, ಪರಿಹಾರ ಕೊಡಿಸಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

**<u>ಪಾಟೀ ಸವಾಲುಃ</u>- ಎದುರುದಾರರ ಪರವಾಗಿ ಶ್ರೀಮತಿ ಜೆ.ಬಿ. ವಕೀಲರಿಂದಃ-**

ನನ್ನ ಗಂಡ ಮೃತಪಟ್ಟ ನಂತರ ನನಗೆ ಅನುಕಂಪದ ನೌಕರಿ ಸಿಕ್ಕಿರುತ್ತದೆ. ನನಗೆ ಈಗ ತಿಂಗಳಿಗೆ ರೂ.21,000/- ಸಂಬಳ ಬರುತ್ತದೆ. ನನ್ನ ಗಂಡ ಮೃತಪಡುವುದಕ್ಕಿಂತ ಮೊದಲು 10 ತಿಂಗಳ ಹಿಂದೆ ಕೆಲಸಕ್ಕೆ ಸೇರಿಕೊಂಡಿದ್ದರು. ನನ್ನ ಗಂಡ ಕೆಲಸಕ್ಕೆ ಸೇರಿಕೊಂಡ ದಿನದಿಂದ ಅವರು ಮೃತಪಡುವವರೆಗೆ ಪಡೆದುಕೊಂಡ ಸಂಬಳದ ಬಗ್ಗೆ

ವೇತನ ದೃಢೀಕರಣ ಪತ್ರವನ್ನು ಹಾಜರಪಡಿಸಲು ನನಗೆ ತೊಂದರೆ ಇಲ್ಲ. ನಾನು ಮತ್ತು ಇತರೇ ಅರ್ಜಿದಾರರು ಒಟ್ಟಿಗೆ ವಾಸವಾಗಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. 4 ನೇ ಅರ್ಜಿದರರು ಈಗ ಅವರ ಮತ್ತೊಬ್ಬ ಮಗನ ಜೊತೆ ವಾಸವಾಗಿರುತ್ತಾರೆ. ನನಗೆ ನನ್ನ ಗಂಡನಷ್ಟೇ ಸಂಬಳ ಬರುತ್ತಿರುವುದರಿಂದ ನನಗೆ ಯಾವುದೇ ಆದಾಯದ ನಷ್ಟ ಉಂಟಾಗಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಎಲ್ಲಾ ದಾಖಲೆಗಳನ್ನು ಸೃಷ್ಟಿಸಿಕೊಂಡು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ವೇತನ ದೃಢೀಕರಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ.

ನನ್ನ ಗಂಡ ಆ ಸಮಯದಲ್ಲಿ ಎಲ.ಎಲ್.ಆರ್. ಚಾಲನಾ ಪರವಾನಗಿ ಹೊಂದಿದ್ದರು ಎಂದರೆ ಸರಿಯಲ್ಲ. ಆ ದಿನ ನನ್ನ ಗಂಡ ಹೆಲ್ಮೆಟ್ ಧರಿಸದೇ ಚಾಲನಾ ಪರವಾನಗಿ ಹೊಂದಿಲ್ಲದೇ ಅಪಘಾತಪಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ– ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ